ಇಂದು ದಿನಾಂಕ:05.01.2024 ರಂದು ಪಿಡಬ್ಲ್ಯೂ:1 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು:</u>** ಪ್ರತಿವಾದಿ 1 ಮತ್ತು 2 ಹಾಗೂ ಅವರ ಪರ ವಕೀಲರು ಹಾಜರಿರುವುದಿಲ್ಲ. ಅದ್ದರಿಂದ, ಅವರುಗಳ ಪರವಾಗಿನ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲು:</u>** ಪ್ರತಿವಾದಿ 3 ರವರ ಪರ ಶ್ರೀ ವಿ.ಟಿ.ಟಿ ವಕೀಲರಿಂದ:

1. ನಾನು ಬೆಂಗಳೂರಿನಲ್ಲಿ ಕಳೆದ ಒಂದು ತಿಂಗಳಿನಿಂದ ಕೆಲಸ ಮಾಡುತ್ತಿದ್ದೇನೆ. ನಾನು ಗೋಣಿಕೊಪ್ಪದಲ್ಲಿ 8 ನೇ ತರಗತಿಯಿಂದ ಎರಡನೇ ಪಿ.ಯು.ಸಿವರೆಗೆ ಓದುತ್ತಿರುತ್ತೇನೆ. ನಂತರ ಕಾಲೇಜು ಶಿಕ್ಷಣವನ್ನು ಬೆಂಗಳೂರಿನಲ್ಲಿ ಮಾಡಿರುತ್ತೇನೆ. ವಾದಿ 2 ನನ್ನ ಜೊತೆ ಬೆಂಗಳೂರಿನಲ್ಲಿಯೇ ಇದ್ದಾರೆ. ನಾವು 2 ನೇ ಪ್ರತಿವಾದಿಯೊಂದಿಗೆ ಬೆಂಗಳೂರಿನಲ್ಲಿ ವಾಸ ಇದ್ದೇವೆ. ನನ್ನ ತಾಯಿ 2 ನೇ ಪ್ರತಿವಾದಿ ಬೆಂಗಳೂರಿಗೆ ಹೋಗಿ 3-4 ವರ್ಷಗಳಾಗಿರುತ್ತವೆ. ಅದಕ್ಕಿಂತ ಮೊದಲು ಮೂಡಿಗೆರೆಯಲ್ಲಿ ವಾಸವಿದ್ದರು. 2 ನೇ ವಾದಿ ಒಂದನೇ ತರಗತಿಯಿಂದ ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಶಾಲೆಯಲ್ಲಿ ಓದುವಾಗ ನನ್ನ ತಮ್ಮ 2 ನೇ ವಾದಿ ನನ್ನ ತಾಯಿಯ ಜೊತೆಯಲ್ಲಿದ್ದರು. ನಾನು ಬಿ.ಕಾಂ ಪದವೀಧರೆ. ಪ್ರತಿವಾದಿ 1 ಮತ್ತು 2 ರವರಾದ ನನ್ನ ತಂದೆ ತಾಯಿ ಸುಮಾರು 5-6 ವರ್ಷಗಳಿಂದ ಬೇರೆ ಬೇರೆ ಇದ್ದಾರೆ. ಈ ಪ್ರಕರಣವನ್ನು ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಈ ದಿನ ನಾನು ಮತ್ತು 2 ನೇ ಪ್ರತಿವಾದಿ ಒಟ್ಟಿಗೆ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದರೆ ಸರಿ. ಈ ಪ್ರಕರಣಕ್ಕೆ ಅಗತ್ಯವಾದ ದಾಖಲಾತಿಗಳನ್ನು 2 ನೇ ಪ್ರತಿವಾದಿಯ ಸಹಾಯದಿಂದ ತೆಗೆದುಕೊಂಡಿರುತ್ತೇನೆ.

2. ಈ ಪ್ರಕರಣದ ದಾಖಲಿಸಲು ವಕೀಲರಿಗೆ ನಾನೇ ನೀಡಿರುತ್ತೇನೆ. ಆ ಮಾಹಿತಿಯನ್ನು 2 ನೇ ಪ್ರತಿವಾದಿಯಿಂದ ಪಡೆದಿರುತ್ತೇನೆ. ವಕೀಲರ ಬಳಿ 2 ನೇ ಪ್ರತಿವಾದಿ ಬರುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅಜ್ಜನ ಪಿತ್ರಾರ್ಜಿತ ಆಸ್ತಿಗಳ ಮೇಲೆ ಈ ದಾವೆ ಸಲ್ಲಿಸಿರುತ್ತೇನೆ. ಅದರ ಸರ್ವೆ ನಂಬರುಗಳ ನನಗೆ ನೆನಪಿಲ್ಲ. ಪ್ರತಿವಾದಿ 1 ಮತ್ತು 2 ರವರು ಶಾಮೀಲಾಗಿ ನಮಗೆ ತಿಳಿಯದ ಹಾಗೆ ಆಸ್ತಿ ಮಾರಾಟ ಮಾಡಿದ್ದಾರೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮತ್ತು ವಾದಪತ್ರದಲ್ಲಿ ಬರೆಸಿದ್ದೇನೆ. ಆಸ್ತಿಗಳನ್ನು ಮಾರಾಟ ಮಾಡಿರುವ ವಿಚಾರ ಈ ಪ್ರಕರಣವನ್ನು ದಾಖಲಿಸುವ ಒಂದು ವರ್ಷದ ಮೊದಲು ನನಗೆ ತಿಳಿದಿರುತ್ತದೆ. 2011 ಮತ್ತು 2012 ರಲ್ಲಿ ನನ್ನ ತಂದೆ ತಾಯಿ ಒಟ್ಟಿಗೆ ಇದ್ದರು.

3. ನಾನು, ಪ್ರತಿವಾದಿ 2 ಮತ್ತು ವಾದಿ 2 ಸೇರಿ ನನ್ನ ತಂದೆ 1 ನೇ ಪ್ರತಿವಾದಿಯ ವಿರುದ್ದ

ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿ. ಆ ಪ್ರಕರಣದಲ್ಲಿ 2011 ರಿಂದಲೂ ನನ್ನ ತಂದೆ ತಾಯಿ ಜೊತೆಯಲ್ಲಿಲ್ಲ ಎಂದು ಹೇಳಿದ್ದೇವೆ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಅಷ್ಟಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಅರ್ಜಿಯನ್ನು ಸಲ್ಲಿಸಲು ಮಾಹಿತಿಯನ್ನು ಯಾರು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು 2 ನೇ ವಾದಿ, 2 ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದು, ಅವರೇ ನಮ್ಮ ಆಗು ಹೋಗುಗಳನ್ನು ನೋಡಿಕೊಳ್ಳುತ್ತಾರೆ ಎಂದರೆ ಸರಿ. ಆಸ್ತಿ ವಿಚಾರವಾಗಿ ತೋಟ ಮಾರಿದ್ದಾರೆ ಎಂದು ನನಗೆ ಗೊತ್ತಾಗಿರುತ್ತದೆ. ಆಸ್ತಿಗಳ ಒಟ್ಟು ವಿಸ್ತೀರ್ಣ ಮತ್ತು ಸರ್ವೇ ನಂಬರ್ ನನಗೆ ಹೇಳಲು ಆಗುವುದಿಲ್ಲ. ಎಷ್ಟು ಹಣಕ್ಕೆ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ಮಾರಾಟ ಮಾಡಿದ ಆಸ್ಗಿಗಳು ನನ್ನ ಅಜ್ಜಿನಿಂದ ತಂದೆಗೆ ಯಾವ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಅಜ್ಜಿನಿಂದ ಬಂದ ಆಸ್ತಿಗಳನ್ನು ಹೊರತುಪಡಿಸಿ ನಮಗೆ ಬೇರೆ ಯಾವುದೇ ಆಸ್ತಿಗಳು ಇಲ್ಲ.

4. ನನ್ನ ತಂದೆ ದೇವವೃಂದದಲ್ಲಿ ಹೋಂ ಸ್ಟೇಯನ್ನು ನಡೆಸುತ್ತಿದ್ದರು ಎಂದರೆ ಸರಿ. ನನಗೆ ತಿಳಿದ ಮಟ್ಟಿಗೆ ಅದನ್ನು ಪ್ರಾರಂಬಿಸಿದ್ದು ಗೊತ್ತಿಲ್ಲ, ಆದರೆ ನಿರ್ಮಾಣವಾಗುವ ಕಾಲಕ್ಕೆ ನಾನು ನೋಡಿದ್ದೆ. ಆ ರೀತಿ 2014 ರಲ್ಲಿ ನೋಡಿರಬಹುದು, ಆದರೆ ಸರಿಯಾಗಿ ನೆನಪಿಲ್ಲ. ನನ್ನ ತಾಯಿ 2 ನೇ ಪ್ರತಿವಾದಿಯ ಸಹಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿಗೆ ಈಗ ದಿನಾಂಕಃ06.03.2015 ಮತ್ತು 16.04.2015 ರ ಎರಡು ಮನವಿ ಪತ್ರಗಳನ್ನು ತೋರಿಸಿ, ಅದರಲ್ಲಿರುವ ಸಹಿ 2 ನೇ ಪ್ರತಿವಾದಿಯದು ಎಂದು ಸೂಚಿಸಲಾಗಿ, ಸಾಕ್ಷಿಯು ಒಪ್ಪಿಕೊಂಡ ಕಾರಣ, ಸದರಿ ದಾಖಲಾತಿಗಳನ್ನು ನಿಡಿ-1 ಮತ್ತು 2 ಹಾಗೂ 2 ನೇ ಪ್ರತಿವಾದಿರವರ ಸಹಿಗಳನ್ನು ನಿಡಿ-1 ಎ ಮತ್ತು ನಿಡಿ-2 ಎ ಎಂದು ಗುರುತಿಸಲಾಯಿತು. ದಾವಾ ಷೇಡ್ಯೂಲ್ 1 ರಿಂದ 3 ನೇ ಆಸ್ತಿಗಳನ್ನು 3 ನೇ ಪ್ರತಿವಾದಿಗೆ ಮಾರಾಟದ ಮಾಡಿದ ಸಂಬಂಧ ಖಾತೆ ದಾಖಲಿಸಬಾರದೆಂದು ನನ್ನ ತಾಯಿ 2 ನೇ ಪ್ರತಿವಾದಿ ತಹಶೀಲ್ದಾರ್, ಕಚೇರಿಗೆ ತಕರಾರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ತದನಂತರ ಪ್ರತಿವಾದಿ 3 ರವರ ಹೆಸರಿಗೆ ಖಾತೆ ಮಾಡಲು ತಕರಾರು ಇಲ್ಲ ಎಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವಾ ಷೆಡ್ಯೂಲ್ 1 ರಿಂದ 3 ಆಸ್ತಿಗಳನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದಾಗ, 2 ನೇ ಪ್ರತಿವಾದಿಯೂ ಸಹ ಸಬ್ ರಜಿಸ್ಟಾರ್ ಕಚೇರಿಗೆ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ತದನಂತರ ನನ್ನ ತಂದೆ ತಾಯಿ ನಡುವೆ ಬಿನ್ನಾಬಿಪ್ರಾಯವಾಗಿ ಖಾತೆ ಮಾಡಬಾರದೆಂದು ಅರ್ಜಿ ನೀಡಿದಾಗ, ಪಂಚಾಯಿತಿ ನಡೆದು, ಆ ತೀರ್ಮಾನದಂತೆ 3 ನೇ ಪ್ರತಿವಾದಿಯ ಪರವಾಗಿ 1 ನೇ ಪ್ರತಿವಾದಿ ಕ್ರಯಪತ್ರದ ಪ್ರತಿಫಲದ ಮೊತ್ತದಲ್ಲಿ ರೂ.25 ಲಕ್ಷ ಹಣವನ್ನು ನನ್ನ ತಾಯಿಯಾದ 2 ನೇ ಪ್ರತಿವಾದಿರವರಿಗೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

5. ನನ್ನ ತಾಯಿ ಈ ಹಿಂದೆ ಬೆಂಗಳೂರಿನಲ್ಲಿ ಪಿ.ಜಿ ನಡೆಸುತ್ತಿದ್ದರು ಎಂದರೆ ಸರಿ. ಆ ಕಾಲಕ್ಕೆ ನನ್ನ ತಂದೆ ಜಂಟಿಯಾಗಿ ನಡೆಸುತ್ತಿದ್ದರು ಎಂದರೆ ಸಾಕ್ಷಿಯು ನನ್ನ ತಾಯಿ ಮಾತ್ರ ನಡೆಸುತ್ತಿದ್ದರು, ಆದರೆ ತಂದೆ ತಾಯಿ ಒಟ್ಟಿಗೆ ಇದ್ದರು ಎಂದು ನುಡಿಯುತ್ತಾರೆ. ಈಗ ನನ್ನ ತಾಯಿ ಕೆಟರಿಂಗ್ ಮತ್ತು ಬೇರೆ ವ್ಯವಹಾರ ಮಾಡುತ್ತಿದ್ದಾರೆ. ನನ್ನ ತಾಯಿ ಸ್ವೀಕರಿಸಿದ ರೂ.25 ಲಕ್ಷ ಹಣವನ್ನು ತೆಗೆದುಕೊಂಡು ಹೋಗಿ ಈಗ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜನ ಯಾವ ವರ್ಷದಲ್ಲಿ ಪಾಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಪಾಲಿನಲ್ಲಿ ಯಾರು ಯಾರಿಗೆ ಯಾವ ಪಾಲು ಹೋಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ. ಪ್ರತಿ ಸರ್ವೆ ನಂಬರಿನಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ತಂದೆ ಆಸ್ತಿಗಳನ್ನು ಏತಕೆ ಮಾರಾಟ ಮಾಡಿರುತ್ತಾರೆ ಎಂಬ ವಿಚಾರವನ್ನು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನನಗೆ ನನ್ನ ತಂದೆ ಆ ವಿಚಾರ ತಿಳಿಸಿಲ್ಲ ಎಂದು ನುಡಿಯುತ್ತಾರೆ. ಕಳೆದ 4 ವರ್ಷಗಳಿಂದ ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ಮಾತುಕತೆ ಇಲ್ಲ. ಅದಕ್ಕಿಂತ ಪೂರ್ವದಲ್ಲಿ ಆಸ್ತಿಗಳನ್ನು ಏಕೆ ಮಾರಾಟ ಮಾಡಿರುತ್ತೀರಾ ಎಂದು ಮಾತುಕತೆ ಮಾಡಿರುತ್ತೇನೆ. ಆ ಕಾಲಕ್ಕೆ 1 ನೇ ಪ್ರತಿವಾದಿ ನನಗೆ ಏನನ್ನು ಹೇಳಿಲ್ಲ. ಆ ರೀತಿ ಮಾತನಾಡುತ್ತಿದ್ದಾಗ, ನನ್ನ ತಾಯಿ 2 ನೇ ಪ್ರತಿವಾದಿ ಸಹ ಇದ್ದರು. ಸದರಿ ಮಾತುಕತೆ ಎಲ್ಲಿ ಆಗಿತ್ತು ಎಂದು ಈಗ ನನಗೆ ನೆನಪಿಲ್ಲ.

6. ದಾವಾ ಷೆಡ್ಯೂಲ್ 1 ರಿಂ 3 ಆಸ್ತಿಗಳನ್ನ ಎಷ್ಟು ಪ್ರತಿಪಲದ ಹಣಕ್ಕೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳ ಕ್ರಯಪತ್ರಗಳ ದಾಖಲಾತಿಗಳನ್ನು ನಾನು ಓದಿ ನೋಡಿಲ್ಲ. 1 ನೇ ಪ್ರತಿವಾದಿಗೆ ಬ್ಯಾಂಕುಗಳಲ್ಲ್ ಸಾಲ ಮತ್ತು ಕೈ ಸಾಲ ಇದ್ದ ಕಾರಣ, ಆ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಏನು ಹೇಳಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ತೋಟ ಅಬಿವೃದ್ಧಿಪಡಿಸುತ್ತಿದ್ದ ಬಗ್ಗೆ ಮತ್ತು ಕೃಷಿ ಚಟುವಟಿಕೆ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಆಸ್ತಿಗಳನ್ನು ಕುಟುಂಬದ ಒಳಿತಿಗಾಗಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿದ್ದರಿಂದ ನನಗೆ ಯಾವುದೇ ರೀತಿ ಪ್ರಯೋಜನವಾಗಿಲ್ಲ ಎಂದು ನುಡಿಯುತ್ತಾರೆ. ಜೀವನಾಂಶಕ್ಕಾಗಿ ಸಲ್ಲಿಸಿದ ಅರ್ಜಿಯಲ್ಲಿ ಒಂದು ರಾಜಿಯಾಗಿರುತ್ತದೆ ಎಂದರೆ ಸರಿ. ಜೀವನಾಂಶಕ್ಕಾಗಿ ಸಲ್ಲಿಸಿದ್ದ ಅರ್ಜಿಯಲ್ಲಿ 2 ನೇ ಪ್ರತಿವಾದಿಗೆ ಪ್ರತಿ ತಿಂಗಳು 6 ಸಾವಿರ ರೂಪಾಯಿ ಮತ್ತು ನನಗೆ ಮತ್ತು 2 ನೇ ವಾದಿಗೆ ತಲಾ ಪ್ರತಿ ತಿಂಗಳು 8 ಸಾವಿರ ಜೀವನಾಂಶವನ್ನು ನೀಡಬೇಕು ಎಂದು ಆದೇಶವಾಗಿತ್ತು ಎಂದರೆ ಸರಿ. ಜೀವನಾಂಶದ ಹಣದ ವಸೂಲಾತಿಗಾಗಿ ಮತ್ತೊಂದು ಅರ್ಜಿ ಸಲ್ಲಿಸಿದ್ದೇವು ಎಂದರೆ ಸರಿ. ಸದರಿ ಪ್ರಕರಣ ರಾಜಿಯಲ್ಲಿ ಅಂತ್ಯವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ಕ್ರಿಮಿನಲ್ ಮಿಸ್

ನಂ.97/2022 ರ ಆರ್ಡರ್ ಶೀಟ್, ಅರ್ಜಿ ಮತ್ತು ರಾಜಿ ಅರ್ಜಿಯ ದೃಢೀಕೃತ ಪ್ರತಿಗಳನ್ನು ತೋರಿಸಿ, ಅದರಲ್ಲಿ ತಮ್ಮ ಸಹಿಗಳಿವೆ ಎಂದು ಸೂಚಿಸಲಾಗಿ, ಸಾಕ್ಷಿಯು ಒಪ್ಪಿಕೊಂಡ ಕಾರಣ, ಸದರಿ ದಾಖಲಾತಿಗಳನ್ನು ನಿಡಿ-3, 4 ಮತ್ತು 5 ಹಾಗೂ ಸಾಕ್ಷಿಯ ಸಹಿಗಳನ್ನು ನಿಡಿ-3 ಎ ಮತ್ತು 4 ಎ ಎಂದು ಗುರುತಿಸಲಾಯಿತು. ನಿಡಿ-5 ರಾಜಿ ಅರ್ಜಿಯಂತೆ, ನನಗೆ, 2 ನೇ ವಾದಿ ಮತ್ತು ನನ್ನ ತಾಯಿ 2 ನೇ ಪ್ರತಿವಾದಿಗೆ ನನ್ನ ತಂದೆ ಒಟ್ಟಾರೆಯಾಗಿ ಜೀವನಾಂಶಕ್ಕಾಗಿ ರೂ.60 ಲಕ್ಷ ಹಣವನ್ನು ಕೊಡುವುದಾಗಿ ತೀರ್ಮಾನವಾಗಿತ್ತು ಎಂದರೆ ಸರಿ. ಅದರಂತೆ ನನಗೆ ಮತತು ನನ್ನ ತಮ್ಮನಿಗೆ ತಲಾ ರೂ.21,60,000/- ಮತ್ತು ನನ್ನ ತಾಯಿಗೆ ರೂ.16,80,000/-ಗಳನ್ನು ಕೊಡುವುದಾಗಿ ತೀರ್ಮಾನವಾಗಿತ್ತು ಎಂದರೆ ಸಾಕ್ಷಿಯು ನನಗೆ ಆ ವಿಭಾಗ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ಸಂಬಂಧ ಭಾಗಶಃ ಹಣ ಸಂದಾಯವಾಗಿದೆ ಎಂದರೆ ಸರಿಯಲ್ಲ. ಆಸ್ತಿಯ ವಿಚಾರದದಲ್ಲಿರುವ ಪ್ರಕರಣಗಳನ್ನು ಸಹ ವಾಪಾಸು ತೆಗೆದುಕೊಳ್ಳಬೇಕೆಂದು ನಿಡಿ-5 ರಂತೆ ರಾಜಿ ಮಾಡಿಕೊಂಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶವನ್ನು ಕೋರಿದ್ದು, ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ